# ಪರೀಕ್ಷಣಾ ಸಾಧನ ಪುಸ್ತಕ

Annual Status of Education Report
ASER 2018 RURAL
Facilitated by PRATHAM

| ಸಮೀಕ್ಷಕರ ಹೆಸರು: | 1. | 2. | | ಗ್ರಾಮದ ಹೆಸರು: | |
|---|---|---|---|---|---|




## ವಿಷಯಗಳ ಪಟ್ಟಿ

1. ನಮೂನೆ 1
   - ಓದುವ ಪರೀಕ್ಷೆ
   - ಗಣಿತ ಪರೀಕ್ಷೆ
   - ಹೆಚ್ಚುವರಿ ಪರೀಕ್ಷಣಾ ಸಾಧನ
2. ನಮೂನೆ 2
   - ಓದುವ ಪರೀಕ್ಷೆ
   - ಗಣಿತ ಪರೀಕ್ಷೆ
   - ಹೆಚ್ಚುವರಿ ಪರೀಕ್ಷಣಾ ಸಾಧನ
3. ನಮೂನೆ 3
   - ಓದುವ ಪರೀಕ್ಷೆ
   - ಗಣಿತ ಪರೀಕ್ಷೆ
   - ಹೆಚ್ಚುವರಿ ಪರೀಕ್ಷಣಾ ಸಾಧನ
4. ನಮೂನೆ 4
   - ಓದುವ ಪರೀಕ್ಷೆ
   - ಗಣಿತ ಪರೀಕ್ಷೆ
   - ಹೆಚ್ಚುವರಿ ಪರೀಕ್ಷಣಾ ಸಾಧನ

ಈ ಪುಸ್ತಕದಲ್ಲಿ ಓದುವುದು, ಗಣಿತ ಮತ್ತು ಹೆಚ್ಚುವರಿ ಪರೀಕ್ಷಣಾ ಸಾಧನದ 4 ನಮೂನೆಗಳಿವೆ.
ಪ್ರತಿ ಮಗುವಿಗೆ ವಿವಿಧ ನಮೂನೆಗಳನ್ನು ಪರೀಕ್ಷಣಾ ಸಾಧನ ಪುಸ್ತಕದಿಂದ ಉಪಯೋಗಿಸಿ.
ನಿಮ್ಮ ಸಮೀಕ್ಷೆ ಮುಗಿದ ಮೇಲೆ ನೀವು ಪರೀಕ್ಷಣಾ ಸಾಧನವನ್ನು ಹಳ್ಳಿಯಲ್ಲಿ ಹಂಚಿಕೆ ಮಾಡಿ.

# ಓದುವ ಪರೀಕ್ಷೆ ನಮೂನೆ (1)

Annual Status of Education Report ASER 2018 RURAL Facilitated by PRATHAM

## ಕಥೆ

ಒಂದು ಊರಿನಲ್ಲಿ ರೇಖಾ ಮತ್ತು ನಮಿತ ಎಂಬ ಅಕ್ಕ ತಂಗಿ ಇದ್ದರು. ಇವರ ಮನೆಯಲ್ಲಿ ತುಂಬಾ ಬಡತನವಿತ್ತು. ರೇಖಾ ತಾನು ಚೆನ್ನಾಗಿ ಓದಿ ಒಳ್ಳೆಯ ಕೆಲಸ ಮಾಡಿ ತನ್ನ ಅಪ್ಪ, ಅಮ್ಮ ಮತ್ತು ತಂಗಿಯನ್ನು ನೋಡಿಕೊಳ್ಳಬೇಕು ಎಂದು ಬಯಸುತ್ತಿದ್ದಳು. ಆದ್ದರಿಂದ ರೇಖಾ ಯಾವಾಗಲೂ ಚೆನ್ನಾಗಿ ಓದಿ ಎಲ್ಲಾ ತರಗತಿಗಳಲ್ಲಿ ಮುಂದೆ ಬರುತ್ತಿದ್ದಳು. ಶಿಕ್ಷಕರ ತರಬೇತಿಯನ್ನು ಮುಗಿಸಿ ಒಳ್ಳೆಯ ಶಿಕ್ಷಕಿಯಾಗಿ ನೇಮಕಗೊಂಡಳು. ಅವಳ ತಂಗಿಯಾದ ನಮಿತಳನ್ನು ಚೆನ್ನಾಗಿ ಓದಿಸಿ ಅವಳನ್ನೂ ಸಹ ಶಿಕ್ಷಕಿಯನ್ನಾಗಿ ಮಾಡಿದಳು. ಮುಂದೆ ಅವರು ತಮ್ಮ ಅಪ್ಪ, ಅಮ್ಮನ ಜೊತೆ ಬಹಳ ಸಂತೋಷದಿಂದ ಜೀವನ ನಡೆಸಿದರು.

## ಪ್ಯಾರ

ಆಶಾ ಮತ್ತು ಉದಯ ಶಾಲೆಯಿಂದ ಮನೆಗೆ ಬಂದರು. ಮನೆಗೆ ಬರುತ್ತಲೇ ಅಮ್ಮನ ಹತ್ತಿರ ತಿಂಡಿ ಕೇಳಿದರು. ಅಮ್ಮ ಕೈಕಾಲು ಮುಖ ತೊಳೆಯಲು ಹೇಳಿದರು. ಇಬ್ಬರೂ ಕೈಕಾಲು ಮುಖ ತೊಳೆದು ಸಂತಸದಿಂದ ತಿಂಡಿ ತಿಂದರು.

## ಪ್ಯಾರ

ಸಂಜು ಮತ್ತು ಮಂಜು ಗೆಳೆಯರು. ಇವರು ಗೆಳೆಯರ ಜೊತೆ ಖೋ ಖೋ ಆಟ ಆಡುತ್ತಿದ್ದರು. ಆಟದಲ್ಲಿ ಮಂಜು ಬಿದ್ದು ಗಾಯಗೊಂಡನು. ಸಂಜು ಅವನನ್ನು ಸಮಾಧಾನ ಮಾಡಿ ಮನೆಗೆ ಕರೆದುಕೊಂಡು ಬಂದನು.

Annual Status of Education Report
असर ASER 2018 RURAL
Facilitated by PRATHAM

# ಓದುವ ಪರೀಕ್ಷೆ ನಮೂನೆ (1)

## ಅಕ್ಷರ

ಮ ರ ಫ

ಹ ಟ

ಡ ಬ ನ

ಕ ಜ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

## ಪದ

ಸರ ಮನೆ

ಕಾಲ

ಬೆಳೆ ಗಿರಿ

ರಾಗ ಓಟ

ತೋಟ

ಸೇಬು ಸೂಜಿ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

# ಗಣಿತ ಪರೀಕ್ಷೆ ನಮೂನೆ (1)

Annual Status of Education Report
असर ASER 2018 RURAL
Facilitated by PRATHAM

| ಅಂಕಿ ಗುರುತಿಸುವಿಕೆ 1–9 | | ಎರಡು ಅಂಕಿಗಳ ಸಂಖ್ಯೆ ಗುರುತಿಸುವಿಕೆ 10–99 | | ಕಳೆಯುವುದು | | ಭಾಗಾಕಾರ |
|---|---|---|---|---|---|---|
| 1 | 4 | 96 | 15 | 82 − 64 | 51 − 28 | 994 ÷ 8 |
| 7 | 3 | 24 | 61 | 37 − 18 | 66 − 28 | 758 ÷ 6 |
| 6 | 9 | 74 | 46 | 73 − 57 | 42 − 17 | 863 ÷ 7 |
| 5 | 2 | 39 | 89 | 98 − 79 | 75 − 58 | 551 ÷ 4 |
| | | 52 | 27 | | | |

5 ಅಂಕಿಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು.

5 ಅಂಕಿ ಸಂಖ್ಯೆಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು.

ಯಾವುದಾದರೂ 2 ಲೆಕ್ಕಗಳನ್ನು ಮಾಡಲಿ, ಎರಡೂ ಉತ್ತರಗಳು ಸರಿಯಾಗಿರಬೇಕು.

ಯಾವುದಾದರೂ ಒಂದು ಲೆಕ್ಕ ಮಾಡಿಸಿರಿ. ಲೆಕ್ಕದ ಉತ್ತರ ಸರಿಯಾಗಿರಬೇಕು.

# ಓದುವ ಪರೀಕ್ಷೆ ನಮೂನೆ (2)

Annual Status of Education Report
असर ASER 2018 RURAL
Facilitated by PRATHAM

## ಕಥೆ

ಒಂದು ಊರಿನಲ್ಲಿ ಒಬ್ಬ ರೈತನಿದ್ದನು. ಅವನ ಹೆಸರು ಬಸವ. ಬಸವ ಒಂದು ಎಕರೆ ಜಮೀನು ಹೊಂದಿದ್ದನು. ಅದರಲ್ಲಿ ಹೂವು ಮತ್ತು ಮಾವು ಬೆಳೆಯುತ್ತಿದ್ದನು. ಅವನ ಹೆಂಡತಿ ಗೌರಮ್ಮ ಜಮೀನಿನಲ್ಲಿ ಬಸವನಿಗೆ ಸಹಾಯ ಮಾಡುತ್ತಿದ್ದಳು. ಇಬ್ಬರೂ ನೀರು ಮತ್ತು ಗೊಬ್ಬರ ಹಾಕಿ ದಿನವೂ ಹೂವು ಮತ್ತು ಮಾವನ್ನು ಬೆಳಸುತ್ತಿದ್ದರು. ಇವರ ಜಮೀನಿನ ಮಾವು ತುಂಬಾ ಸಿಹಿಯಾಗಿರುತ್ತಿತ್ತು. ಬಸವ ದಿನವೂ ಕನಕಾಂಬರ ಮತ್ತು ಮಲ್ಲಿಗೆ ಹೂವನ್ನು ಕಿತ್ತು ಮನೆಗೆ ತರುತ್ತಿದ್ದನು. ಹೂವು ಮತ್ತು ಮಾವನ್ನು ಊರಿನ ಸಂತೆಯಲ್ಲಿ ಮಾರುತ್ತಿದ್ದರು. ಮಾರಿ ಬಂದ ಹಣದಿಂದ ಕುಟುಂಬವನ್ನು ನಡೆಸಿಕೊಂಡು ಹೋಗುತ್ತಿದ್ದರು.

## ಪ್ಯಾರ

ರಮೇಶ ತುಂಬಾ ಜಾಣ ಹುಡುಗ. ಅವನಿಗೆ ಹಾಡು ಹೇಳುವುದು ತುಂಬಾ ಇಷ್ಟ. ಅವನು ಹಾಡು ಕಲಿಯಲು ದಿನಾ ಸಂಜೆ ಗುರುಗಳ ಬಳಿ ಹೋಗುತ್ತಿದ್ದನು. ರಮೇಶ ತುಂಬಾ ಚೆನ್ನಾಗಿ ಹಾಡನ್ನು ಹೇಳುತ್ತಿದ್ದನು.

## ಪ್ಯಾರ

ಗಾಳಿಪಟದ ಹಬ್ಬ ಬಂದಿತು. ರವಿಗೆ ಗಾಳಿಪಟ ಹಾರಿಸುವ ಆಸೆಯಾಯಿತು. ಹಠ ಹಿಡಿದು ತನ್ನ ಅಣ್ಣನ ಹತ್ತಿರ ಗಾಳಿಪಟ ಮಾಡಿಸಿದನು. ರವಿಯು ಗೆಳೆಯರ ಜೊತೆ ಗಾಳಿಪಟ ಹಾರಿಸಿ ಸಂತೋಷದಿಂದ ಕುಣಿದಾಡಿದನು.

# ಓದುವ ಪರೀಕ್ಷೆ ನಮೂನೆ (2)

Annual Status of Education Report
असर ASER 2018 RURAL
Facilitated by PRATHAM

## ಅಕ್ಷರ

ದ ಖ ಯ

ಪ ಲ

ಗ ಸ ತ

ಚ ಮ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

## ಪದ

ಮರ ಕೆರೆ

ರವಿ

ಓಟ ರಾಣಿ

ದೊರೆ ನದಿ

ಜಾಣ

ನೂರು ಕೇಳು

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

# ಗಣಿತ ಪರೀಕ್ಷೆ ನಮೂನೆ (2)

| ಅಂಕಿ ಗುರುತಿಸುವಿಕೆ 1–9 | | ಎರಡು ಅಂಕಿಗಳ ಸಂಖ್ಯೆ ಗುರುತಿಸುವಿಕೆ 10–99 | | ಕಳೆಯುವುದು | | ಭಾಗಾಕಾರ |
|---|---|---|---|---|---|---|
| 5 | 7 | 94 | 11 | 71 − 53 | 57 − 18 | 7 ) 872 ( |
| | | 26 | 87 | | | |
| 8 | 4 | | | 92 − 68 | 36 − 19 | 6 ) 741 ( |
| | | 76 | 35 | | | |
| 2 | 9 | | | 85 − 56 | 41 − 27 | 4 ) 577 ( |
| | | 48 | 63 | | | |
| 3 | 1 | 54 | 29 | 62 − 37 | 88 − 69 | 8 ) 997 ( |

| | | | |
|---|---|---|---|
| 5 ಅಂಕಿಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು. | 5 ಅಂಕಿ ಸಂಖ್ಯೆಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು. | ಯಾವುದಾದರೂ 2 ಲೆಕ್ಕಗಳನ್ನು ಮಾಡಲಿ, ಎರಡೂ ಉತ್ತರಗಳು ಸರಿಯಾಗಿರಬೇಕು. | ಯಾವುದಾದರೂ ಒಂದು ಲೆಕ್ಕ ಮಾಡಿಸಿರಿ. ಲೆಕ್ಕದ ಉತ್ತರ ಸರಿಯಾಗಿರಬೇಕು. |

# ಓದುವ ಪರೀಕ್ಷೆ ನಮೂನೆ (3)



## ಕಥೆ

ಅಂದು ರಜಾ ದಿನವಾಗಿತ್ತು. ಗೀತ ಆಟ ಆಡಿ ನೀರು ಕುಡಿಯಲು ಮನೆಗೆ ಹೋಗುತ್ತಿದ್ದಳು. ಆಗ ದಾರಿಯಲ್ಲಿ ಬಿದ್ದಿದ್ದ ಹಕ್ಕಿಯೊಂದನ್ನು ನೋಡಿದಳು. ತಕ್ಷಣ ಅವಳು ಆ ಹಕ್ಕಿಯನ್ನು ಮನೆಯೊಳಗೆ ತಂದಳು. ಇದನ್ನು ನೋಡಿದ ಅಮ್ಮ ಆ ಹಕ್ಕಿಗೆ ನೀರು ಕುಡಿಸಿದಳು. ಸ್ವಲ್ಪ ಹೊತ್ತಿಗೆ ಹಕ್ಕಿಯು ಚೇತರಿಸಿಕೊಂಡಿತು. ಗೀತ ಅದನ್ನು ಮನೆಯ ಮಹಡಿಯ ಮೇಲೆ ಬಿಟ್ಟು ಬಂದಳು. ಆಮೇಲೆ ಅವಳು ಕೆಳಗೆ ಬಂದು ಹಕ್ಕಿಗೆ ಏನಾಗಿತ್ತು? ಎಂದು ಅಮ್ಮನನ್ನು ಕೇಳಿದಳು. ಬಿಸಿಲಿನ ಝಳದಿಂದ ಅದು ಬಿದ್ದಿತ್ತು. ನೀರು ಕುಡಿಸಿದ್ದರಿಂದ ಅದು ಚೇತರಿಸಿಕೊಂಡು ಹಾರಿ ಹೋಯಿತು ಎಂದು ಹೇಳಿದಳು.

## ಪ್ಯಾರ

ರಮಳ ಮನೆಯಲ್ಲಿ ಒಂದು ಹಸು ಇದೆ. ಅವಳು ಆ ಹಸುವನ್ನು ತುಂಬಾ ಪ್ರೀತಿಸುತ್ತಾಳೆ. ಆ ಹಸು ಮುಂಜಾನೆ ಮತ್ತು ಸಂಜೆ ಹಾಲು ಕೊಡುತ್ತದೆ. ಈಗ ದಿನವೂ ರಮ ಸವಿಯಾದ ಹಾಲು ಕುಡಿಯುತ್ತಾಳೆ.

## ಪ್ಯಾರ

ಶಾಲೆಯ ಪಕ್ಕ ಖಾಲಿ ಜಾಗ ಇತ್ತು. ಖಾಲಿ ಜಾಗದಲ್ಲಿ ಸುಮ ಮಲ್ಲಿಗೆ ಬಳ್ಳಿ ನೆಟ್ಟಳು. ಸುಮ ಮಲ್ಲಿಗೆ ಬಳ್ಳಿಗೆ ದಿನವೂ ನೀರು ಹಾಕುತ್ತಿದ್ದಳು. ಬಳ್ಳಿ ಬೆಳೆಯಿತು ಮೊಗ್ಗು ಅರಳಿ ಹೂವಾಯಿತು.

Annual Status of Education Report
असर ASER 2018 RURAL
Facilitated by PRATHAM

# ಓದುವ ಪರೀಕ್ಷೆ ನಮೂನೆ (3)

## ಅಕ್ಷರ

ವ ಫ ಛ

ಅ ಎ

ಷ ಗ ಠ

ಣ ಧ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

## ಪದ

ಆನೆ ತುದಿ

ಶಾಲೆ

ಕೋಟೆ ನೀನು

ಹೊರೆ ರಜೆ

ದೂರು

ಮಾವು ತೂಕ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

Annual Status of Education Report
असर ASER 2018 RURAL
Facilitated by PRATHAM

# ಗಣಿತ ಪರೀಕ್ಷೆ ನಮೂನೆ (3)

| ಅಂಕಿ ಗುರುತಿಸುವಿಕೆ 1–9 | | ಎರಡು ಅಂಕಿಗಳ ಸಂಖ್ಯೆ ಗುರುತಿಸುವಿಕೆ 10–99 | | ಕಳೆಯುವುದು | | ಭಾಗಾಕಾರ |
|---|---|---|---|---|---|---|
| 3 | 7 | 13 | 98 | 53 − 17 | 97 − 69 | 8 ) 987 ( |
| 1 | 4 | 65 | 42 | 71 − 57 | 46 − 28 | 6 ) 796 ( |
| 8 | 2 | 37 | 74 | 58 − 29 | 95 − 76 | 7 ) 897 ( |
| 5 | 9 | 81 | 26 | 33 − 16 | 83 − 54 | 4 ) 547 ( |
| | | 47 | 56 | | | |

5 ಅಂಕಿಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು.

5 ಅಂಕಿ ಸಂಖ್ಯೆಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು.

ಯಾವುದಾದರೂ 2 ಲೆಕ್ಕಗಳನ್ನು ಮಾಡಲಿ, ಎರಡೂ ಉತ್ತರಗಳು ಸರಿಯಾಗಿರಬೇಕು.

ಯಾವುದಾದರೂ ಒಂದು ಲೆಕ್ಕ ಮಾಡಿಸಿರಿ. ಲೆಕ್ಕದ ಉತ್ತರ ಸರಿಯಾಗಿರಬೇಕು.

# ಓದುವ ಪರೀಕ್ಷೆ ನಮೂನೆ (4)

Annual Status of Education Report
ASER 2018 RURAL
Facilitated by PRATHAM

## ಕಥೆ

ಒಂದು ಕಾಡಿನ ಹತ್ತಿರದ ಊರಿನಲ್ಲಿ ಎಲ್ಲರೂ ಸುಖವಾದ ಜೀವನ ನಡೆಸುತ್ತಿದ್ದರು. ಆ ಊರಿನ ಜನರು ಪರಸ್ಪರ ಸಹಾಯ ಮಾಡುತ್ತಿದ್ದರು. ಅದೇ ಊರಿನಲ್ಲಿ ಚಂದು ಎಂಬ ಬುದ್ಧಿವಂತ ಮತ್ತು ಧೈರ್ಯಶಾಲಿಯಾದ ಒಬ್ಬ ಯುವಕನಿದ್ದನು. ಹೀಗಿರುವಾಗ ಒಂದು ದಿನ ಊರಿಗೆ ಕರಡಿಗಳ ಹಿಂಡು ದಾಳಿ ಮಾಡಿತು. ಊರಿನ ಜನರೆಲ್ಲಾ ತಮ್ಮ ಮನೆಯಲ್ಲಿ ಅವಿತುಕೊಂಡರು. ಇದನ್ನು ಗಮನಿಸಿದ ಚಂದು ತನ್ನ ಕೆಲವು ಗೆಳೆಯರೊಡನೆ ಕೂಡಿ ಆ ಕರಡಿಗಳನ್ನು ಧೈರ್ಯದಿಂದ ಎದುರಿಸಿ ಊರಿನಿಂದ ಕಾಡಿಗೆ ಕಳುಹಿಸಿದನು. ಇದನ್ನು ನೋಡಿದ ಊರಿನ ಜನರು ಚಂದು ಮತ್ತು ಗೆಳೆಯರ ಧೈರ್ಯ ಮತ್ತು ಸಾಹಸವನ್ನು ಮೆಚ್ಚಿ ಹೊಗಳಿದರು.

## ಪ್ಯಾರ

ಸೋಮು ಮತ್ತು ಗೆಳೆಯರು ಆಟ ಆಡಲು ಹೋದರು. ಅಲ್ಲಿ ಎಲ್ಲರೂ ಸೇರಿ ಲಗೋರಿ ಆಟ ಆಡಿದರು. ಲಗೋರಿ ಆಡಿ ಎಲ್ಲರೂ ದಣಿದರು. ಮನೆಗೆ ಬಂದು ಎಲ್ಲರೂ ತಂಪಾದ ನೀರು ಕುಡಿದರು.

## ಪ್ಯಾರ

ಸೋಮನ ಪ್ರೀತಿಯ ನಾಯಿ ಟಾಮಿ. ಅದು ಮನೆಯ ಬಾಗಿಲ ಬಳಿ ಬಂದಿತು. ನಾಯಿ ಕಂಡು ಸೋಮ ದೋಸೆ ತಂದನು. ದೋಸೆ ಕಂಡ ನಾಯಿ ಬಾಲ ಆಡಿಸಿತು. ನಾಯಿ ದೋಸೆಯನ್ನು ಗಬಗಬನೆ ತಿಂದಿತು.

Annual Status of Education Report
असर ASER 2018 RURAL
Facilitated by PRATHAM

# ಓದುವ ಪರೀಕ್ಷೆ ನಮೂನೆ (4)

## ಅಕ್ಷರ

ಊ ಈ ಛ

ಲ ಮ

ಥ ಸ ದ

ಡ ಟ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

## ಪದ

ಗುರು ಬಿಳಿ

ಜೇಬು

ಬಾಣ ಕೆನೆ

ಜೋಳ ಹಠ

ನೀರು

ಗೂಬೆ ತಾಸು

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

# ಗಣಿತ ಪರೀಕ್ಷೆ ನಮೂನೆ (4)

| ಅಂಕಿ ಗುರುತಿಸುವಿಕೆ 1–9 | ಎರಡು ಅಂಕಿಗಳ ಸಂಖ್ಯೆ ಗುರುತಿಸುವಿಕೆ 10–99 | ಕಳೆಯುವುದು | ಭಾಗಾಕಾರ |
|---|---|---|---|
| 2 7 | 31 95 | 91 − 72 ; 67 − 38 | 6 ) 763 |
| 5 3 | 78 49 | 74 − 59 ; 34 − 18 | 4 ) 589 |
| 9 8 | 36 62 | 48 − 19 ; 85 − 67 | 7 ) 894 |
| 4 1 | 24 84 | 76 − 58 ; 64 − 28 | 8 ) 986 |
| | 57 17 | | |
| 5 ಅಂಕಿಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು. | 5 ಅಂಕಿ ಸಂಖ್ಯೆಗಳನ್ನು ಕೇಳಿ ಅವುಗಳಲ್ಲಿ 4 ಉತ್ತರಗಳು ಸರಿಯಾಗಿರಬೇಕು. | ಯಾವುದಾದರೂ 2 ಲೆಕ್ಕಗಳನ್ನು ಮಾಡಲಿ, ಎರಡೂ ಉತ್ತರಗಳು ಸರಿಯಾಗಿರಬೇಕು. | ಯಾವುದಾದರೂ ಒಂದು ಲೆಕ್ಕ ಮಾಡಿಸಿರಿ. ಲೆಕ್ಕದ ಉತ್ತರ ಸರಿಯಾಗಿರಬೇಕು. |

Annual Status of Education Report

असर ASER 2018 RURAL

Facilitated by PRATHAM